ನನ್ನ ಓದು

## ಗೌರಿ

# ಎರಡು ರಟ್ಟುಗಳ ನಡುವೆ ಕಥನ–ಓದುಗ ಜಿಜ್ಞಾಸೆ

ಕನ್ನಡ ಸಾಹಿತ್ಯದ ಕಿಟಕಿ–ಕನ್ನಡಿಯಷ್ಟೇ ಅಲ್ಲದೆ, ಬಹುಪಾತ್ರಗಳನ್ನು ನಿರ್ವಹಿಸುತ್ತಿರುವ ಮತ್ತು ತಾವು ನಿರ್ವಹಿಸಿದ ಎಲ್ಲ ಪಾತ್ರಗಳಲ್ಲಿಯೂ ತಮ್ಮದೇ ವಿಶಿಷ್ಟ ಮೊಹರು ಮೂಡಿಸಿರುವವರು ಹಿರಿಯ ಸಾಹಿತಿ ಎಸ್. ದಿವಾಕರ್. ವಿಭಿನ್ನತೆಯನ್ನೇ ಸಹಿಯನ್ನಾಗಿಸಿಕೊಂಡಿರುವ ಅವರು ಕನ್ನಡಕ್ಕೆ ತಂದಿರುವ ಹೊಸ ಹೊತ್ತಿಗೆ 'ಎರಡು ರಟ್ಟುಗಳ ನಡುವೆ'. ಇವು ಒಬ್ಬ ಲೇಖಕನ ಹಲವು ಕಥೆಗಳಲ್ಲ; ಹಲವು ಲೇಖಕರು ಬರೆದ ಒಂದೇ ವಸ್ತುವಿನ ಕುರಿತಾದ ಕಥೆಗಳು. ಪುಸ್ತಕ ಜಗತ್ತಿನ ಕುರಿತಾಗಿ ಜಗತ್ತಿನ ಶ್ರೇಷ್ಠ ಕಥೆಗಾರರು ಬರೆದ ಹದಿನಾಲ್ಕು ಕಥೆಗಳು ಇಲ್ಲಿವೆ. 'ಕಥೆಗಾರರ ಕಲ್ಪನೆಯಲ್ಲಿ ಪುಸ್ತಕ, ಓದು, ಲೈಬ್ರರಿ' ಎಂಬ ಉಪಶೀರ್ಷಿಕೆಯೇ ಇದರ ಹೂರಣದ ಬಗ್ಗೆ ಹೇಳುತ್ತದೆ. ಬೇರೆ ಬೇರೆ ದೇಶ–ಭಾಷೆಯ ಹದಿಮೂರು ಕಥೆಗಾರರ ಕಥೆಗಳನ್ನು ಕನ್ನಡಕ್ಕೆ ತಂದಿರುವ ದಿವಾಕರ್ ಅವರ ಒಂದು ಕಥೆಯೂ ಸಂಕಲನದಲ್ಲಿದೆ.

ವಸ್ತು ಒಂದೇ ಆಗಿದ್ದರೂ, ಅದನ್ನು ನಿರ್ವಹಿಸಿರುವ ರೀತಿಯಲ್ಲಿ, ತಾಂತ್ರಿಕತೆಯಲ್ಲಿ, ಪಾತ್ರಗಳಲ್ಲಿ, ಪ್ರತಿ ಕಥೆಯೂ ಭಿನ್ನವೇ ಆಗಿದೆ. ಒಟ್ಟಾಗಿ ಮತ್ತು ಬಿಡಿಬಿಡಿಯಾಗಿ ಹಲವು ರೀತಿಗಳ ಓದಿಗೆ ಈ ಪುಸ್ತಕ ನಮ್ಮನ್ನು ಆಹ್ವಾನಿಸುತ್ತದೆ. ಪುಸ್ತಕ, ಲೇಖಕ, ಓದುಗ, ಸಮಾಜಗಳ ನಡುವಿನ ಸಂಬಂಧಗಳನ್ನು ಹಲವು ನೆಲೆಗಳಲ್ಲಿ ಪರಿಶೀಲಿಸುತ್ತದೆ.

ಈ ಸಂಕಲನದ ಮೊದಲ ಕಥೆ 'ಕಾಗದದ ಜಗತ್ತು' (ಲೂಯಿಜಿ ಪಿರಾಂಡೆಲೊ) ವಾಸ್ತವ ಜಗತ್ತು ಮತ್ತು ಪುಸ್ತಕದ ಜಗತ್ತಿನ ನಡುವಿನ ವಿಚಿತ್ರ ಸಂಬಂಧದ ಬಗ್ಗೆ ಗಾಢವಾಗಿ ಯೋಚಿಸುವಂತೆ ಮಾಡುತ್ತದೆ. ಕಥಾನಾಯಕ ವಲೆರಿಯಾನೋ ಬಲಿಚ್ಚಿಗೆ ಪುಸ್ತಕ ಓದುವುದು ಬಿಟ್ಟರೆ ಬೇರೇನೂ ಗೊತ್ತಿಲ್ಲ. ಓದುತ್ತಲೇ ಜೀವನ ಕಳೆದಿರುವ ಅವನು ವಾಸ್ತವ ಬದುಕಿನಲ್ಲಿ ಏನೂ ಮಾಡಿಲ್ಲ, ಏನೂ ನೋಡಿಲ್ಲ, ತನ್ನ ಬದುಕನ್ನು ಬದುಕಿರಲೇ ಇಲ್ಲ. ಅವನಿಗೆ ಕುರುಡುತನ ಆವರಿಸಿ, ಪುಸ್ತಕದ ಜಗತ್ತಿನೊಂದಿಗೂ ವಂಚಿತನಾಗುವ ಹಂತಕ್ಕೆ ಬಂದಿದ್ದಾನೆ. ಆದರೆ, ಅವನಿಗೆ ಗೊತ್ತಿಲ್ಲದೆಯೇ ಅವನೊಳಗೊಂದು ಪ್ರಪಂಚ ರೂಪುಗೊಂಡಿದೆ. ಅದು ಅವನು ಬದುಕಿರದ ವಾಸ್ತವದ ಜಗತ್ತಿಗಿಂತ ಭಿನ್ನವಾಗಿದ್ದು. ಹಾಗಾದರೆ ಅವನಿಗೆ ಉಂಟಾದ ಕುರುಡುತನ ಅವನು ಬದುಕಿಯೇ ಇರದ ವಾಸ್ತವ ಜಗತ್ತಿಗೆ ಸಂಬಂಧಿಸಿದ್ದೋ ಅಥವಾ ಜೀವನವಿಡೀ ಓದುತ್ತಲೇ ಅವನೊಳಗೆ ರೂಪುಗೊಂಡ ಮಾನಸಿಕ ಜಗತ್ತಿಗೆ ಸಂಬಂಧಿಸಿದ್ದೋ? ಈ ಪ್ರಶ್ನೆಯನ್ನು ಕಥೆಗಾರ ಕಥೆಯ ಶಿಲ್ಪದ ಮೂಲಕವೇ ಧ್ವನಿಸುವುದು ಕುತೂಹಲಕಾರಿಯಾಗಿದೆ.

ಈ ಕಥೆ ಒಂದು ಬೀದಿಜಗಳದಿಂದ ಶುರುವಾಗುತ್ತದೆ. ಆ ಜಗಳ ಮುಂದುವರಿಕೆಯಲ್ಲಿಯೇ ಬಲಿಚ್ಚಿಗೆ ಕುರುಡುತನ ಬಂದಿರುವುದು ಜಗಜ್ಜಾಹೀರಾಗುತ್ತದೆ. ಅವನ ಸುತ್ತಲಿನ ಜಗತ್ತಿನ ಪಾಲಿಗೆ ಅವನು, ವೈದ್ಯರು ಎಚ್ಚರಿಸಿದರೂ ಕೇಳದೆ ಪುಸ್ತಕ ಓದಿಓದಿ ಸ್ವಯಂಕೃತವಾಗಿ ಕುರುಡಾದ